ಮಾಡುವಂತೆ ಆಯಿಲ್ ಕಂಪನಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಈ ಕೊರತೆಯನ್ನು ಸಹ ಫೆಬ್ರವರಿ 2007ರ ಅಂತ್ಯದೊಳಗಾಗಿ ನೀಗಿಸುವುದಾಗಿ ಹೆಚ್.ಪಿ.ಸಿ.ಯ ಹಿರಿಯ ಪ್ರಾಂತೀಯ ವ್ಯವಸ್ಥಾಪಕರು ತಿಳಿಸಿರುತ್ತಾರೆ.

3. ಕೊಳ್ಳೇಗಾಲ ಪಟ್ಟಣದ ಏಜೆನ್ಸಿಯವರಿಗೆ ಅವರ ಬೇಡಿಕೆಗನು ಗುಣವಾಗಿ ಸಿಲಿಂಡರ್‌ಗಳನ್ನು ಆಯಿಲ್ ಕಂಪನಿಯಿಂದ ಪಡೆದುಕೊಳ್ಳಲು ಸೂಚನೆ ನೀಡಲಾಗಿದೆ.

4. ಕೊಳ್ಳೇಗಾಲ ಪಟ್ಟಣದಲ್ಲಿ ಹೆಚ್ಚುವರಿಯಾಗಿ ಅನಿಲ ವಿತರಣಾ ಕೇಂದ್ರ ತೆರೆಯಲು ತೈಲ ಕಂಪನಿಯ ರಾಜ್ಯ ಮಟ್ಟದ ಸಮನ್ವಯಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

666 (418) : ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006-07ನೇ ಸಾಲಿನಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿಪಡಿಸಲು ಸರ್ಕಾರವು ಹಮ್ಮಿಕೊಳ್ಳಲಾದ ಯೋಜನೆಗಳಾವುವು; ಇದನ್ನು ಯಾವ ಯಾವ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ ; ಈವರೆವಿಗೆ ರಾಜ್ಯ ಸರ್ಕಾರವು ವಿನಿಯೋಗಿಸಿದ ಅನುದಾನವೆಷ್ಟು ;

ಆ) ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಸರ್ಕಾರದ ಸಹಯೋಗ ದೊಡನೆ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳೇನು; ಈ ಕಾರ್ಯಕ್ರಮಗಳನ್ನು ಯಾವ ಯಾವ ಜಿಲ್ಲೆಗೆ ವಿಸ್ತರಿಸಲಾಗಿದೆ ;

ಇ) ಇದಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಒದಗಿಸಲಾದ ಅನುದಾನವೆಷ್ಟು ; ಈ ಪೈಕಿ ಜಿಲ್ಲಾವಾರು ಉಪಯೋಗಿಸಲಾದ ಹಣವೆಷ್ಟು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ಇರುವ ವಿವಿಧ ಯೋಜನೆಗಳು ಕೆಳಕಂಡಂತಿವೆ.

	ಯೋಜನೆ ಹೆಸರು	ಅನುಷ್ಠಾನದಲ್ಲಿರುವ ಜಿಲ್ಲೆಗಳು
1	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	ಎಲ್ಲಾ 27 ಜಿಲ್ಲೆಗಳು ಹಾಗೂ ಹೆಚ್ಚುವರಿ ಮಧುಗಿರಿ, ಚಿಕ್ಕಬಳ್ಳಾಪುರ ತಾಲ್ಲೂಕುಗಳು

2	ನದಿ ಕಣಿವೆ ಯೋಜನೆ	ಜಿಲ್ಲೆಗಳು: ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಬೆಳಗಾಂ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಿಜಾಪುರ, ಬಾಗಲಕೋಟೆ
3	ಉಪ್ಪು ಮತ್ತು ಕ್ಷಾರೀಯ ನೀರು ಆವೃತ ಪ್ರದೇಶವನ್ನು ಸುಧಾರಿಸುವ ಯೋಜನೆ	ಜಿಲ್ಲೆಗಳು: ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಬೆಳಗಾಂ, ಬಾಗಲಕೋಟೆ, ರಾಯಚೂರು, ಕೊಪ್ಪಳ
4	ಬರಗಾಲಪೀಡಿತ ಪ್ರದೇಶಾಭಿವೃದ್ಧಿ ಯೋಜನೆ	ಜಿಲ್ಲೆಗಳು: ಬೆಂಗಳೂರು ಗ್ರಾಮಾಂತರ, ಕೋಲಾರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಮೈಸೂರು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಬೆಳಗಾಂ, ಗದಗ, ಹಾವೇರಿ, ಧಾರವಾಡ, ಗುಲ್ಬರ್ಗಾ, ಬೀದರ್ ಮತ್ತು ಹೆಚ್ಚುವರಿ ಮಧುಗಿರಿ, ಚಿಕ್ಕಬಳ್ಳಾಪುರ
5	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ	ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದ.ಕನ್ನಡ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಉಡುಪಿ, ತುಮಕೂರು, ಗುಲ್ಬರ್ಗಾ, ಕೋಲಾರ
6	ಮರುಭೂಮಿ ಅಭಿವೃದ್ಧಿ ಯೋಜನೆ	ದಾವಣಗೆರೆ, ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ
7	ಸುಜಲ ಜಲಾನಯನ ಯೋಜನೆ (ವಿಶ್ವಬ್ಯಾಂಕ್ ನೆರವು)	ಚಿತ್ರದುರ್ಗ, ಕೋಲಾರ, ತುಮಕೂರು, ಧಾರವಾಡ ಮತ್ತು ಹಾವೇರಿ

8	ನಬಾರ್ಡ್ (ಆರ್.ಐ.ಡಿ.ಎಫ್ ನೆರವು)	ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ತುಮಕೂರು, ಮಧುಗಿರಿ, ಶಿವಮೊಗ್ಗ, ಮಂಡ್ಯ, ಚಾಮರಾಜನಗರ, ಬೆಳಗಾಂ, ಬಾಗಲಕೋಟೆ, ಗದಗ, ಹಾವೇರಿ, ಧಾರವಾಡ, ರಾಯಚೂರು, ಕೊಪ್ಪಳ, ಬೀದರ್
9	ನಬಾರ್ಡ್ (ಡಬ್ಲ್ಯೂ.ಡಿ.ಎಫ್.)	ಎಲ್ಲಾ ಜಿಲ್ಲೆಗಳು (ಕೊಡಗು, ಉತ್ತರ ಕನ್ನಡ, ದ.ಕನ್ನಡ, ಉಡುಪಿ ಮತ್ತು ಬೆಂಗಳೂರು ನಗರ ಹೊರತುಪಡಿಸಿ)
10	ಸುವರ್ಣ ಕೃಷಿ ಹೊಂಡ	ಎಲ್ಲಾ 27 ಜಿಲ್ಲೆಗಳು ಹಾಗೂ ಹೆಚ್ಚುವರಿ ಮಧುಗಿರಿ, ಚಿಕ್ಕಬಳ್ಳಾಪುರ ಜಿಲ್ಲೆಗಳು

ಮೇಲಿನ ಎಲ್ಲಾ ಯೋಜನೆಗಳು ಸೇರಿದಂತೆ ಈವರೆಗೆ ಒಟ್ಟು 15523.74 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ)

	ಯೋಜನೆ ಹೆಸರು	ಅನುಷ್ಠಾನದಲ್ಲಿರುವ ಜಿಲ್ಲೆಗಳು
1	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	ಎಲ್ಲಾ 27 ಜಿಲ್ಲೆಗಳು ಹಾಗೂ ಹೆಚ್ಚುವರಿ ಮಧುಗಿರಿ, ಚಿಕ್ಕಬಳ್ಳಾಪುರ
2	ನದಿ ಕಣಿವೆ ಯೋಜನೆ	ಜಿಲ್ಲೆಗಳು: ಚಿತ್ರದುರ್ಗ, ದಾವಣಗೆರೆ, ಬಾಗಲಕೋಟೆ, ಗದಗ, ಹಾವೇರಿ, ಧಾರವಾಡ, ರಾಯಚೂರು, ಕೊಪ್ಪಳ, ಗುಲ್ಬರ್ಗಾ ಮತ್ತು ಬಿಜಾಪುರ
3	ಉಪ್ಪು ಮತ್ತು ಕ್ಷಾರೀಯ ನೀರು ಆವೃತ ಪ್ರದೇಶವನ್ನು ಸುಧಾರಿಸುವ ಯೋಜನೆ	ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಬೆಳಗಾಂ, ಬಾಗಲಕೋಟೆ, ರಾಯಚೂರು, ಕೊಪ್ಪಳ
4	ಬರಗಾಲಪೀಡಿತ ಪ್ರದೇಶಾಭಿವೃದ್ಧಿ ಯೋಜನೆ	ಜಿಲ್ಲೆಗಳು: ಬೆಂಗಳೂರು ಗ್ರಾಮಾಂತರ, ಕೋಲಾರ, ಚಿತ್ರದುರ್ಗ, ದಾವಣಗೆರೆ,

		ತುಮಕೂರು, ಮೈಸೂರು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಬೆಳಗಾಂ, ಗದಗ, ಹಾವೇರಿ, ಧಾರವಾಡ, ಗುಲ್ಬರ್ಗಾ, ಬೀದರ್ ಮತ್ತು ಹೆಚ್ಚುವರಿ ಮಧುಗಿರಿ, ಚಿಕ್ಕಬಳ್ಳಾಪುರ
5	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ	ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದ.ಕನ್ನಡ, ಚಾಮರಾಜನಗರ, ಕೊಡಗು, ಬೆಳಗಾಂ, ಹಾವೇರಿ, ಉ.ಕನ್ನಡ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್
6	ಮರುಭೂಮಿ ಅಭಿವೃದ್ಧಿ ಯೋಜನೆ	ದಾವಣಗೆರೆ, ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ
7	ನಬಾರ್ಡ್ (ಡಬ್ಲ್ಯೂಡಿಎಫ್)	ಎಲ್ಲಾ ಜಿಲ್ಲೆಗಳು (ಕೊಡಗು, ಉತ್ತರ ಕನ್ನಡ, ದ.ಕನ್ನಡ, ಉಡುಪಿ ಮತ್ತು ಬೆಂಗಳೂರು ನಗರ ಹೊರತುಪಡಿಸಿ)

ಇ) ಇದಕ್ಕಾಗಿ ಕೇಂದ್ರ ಸರ್ಕಾರವು ಒದಗಿಸಿದ ಅನುದಾನ ಹಾಗೂ ಜಿಲ್ಲಾವಾರು ವೆಚ್ಚದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ.ಸ.	ಜಿಲ್ಲೆಯ ಹೆಸರು	ಒಟ್ಟು ಬಿಡುಗಡೆ (ಲಕ್ಷಗಳಲ್ಲಿ)	ಜನವರಿ 2007ರ ಅಂತ್ಯಕ್ಕೆ ಖರ್ಚಾದ ಹಣ
1	ಬಾಗಲಕೋಟೆ	1810.74	1313.34
2	ಬೆಂಗಳೂರು ನಗರ	2.93	11.56
3	ಬೆಂಗಳೂರು ಗ್ರಾಮಾಂತರ	238.70	304.01
4	ಬೆಳಗಾಂ	644	45452.34
5	ಬಳ್ಳಾರಿ	1298.09	486.38
6	ಬೀದರ್	154.72	36.13
7	ಬಿಜಾಪುರ	337.99	183.45
8	ಚಾಮರಾಜನಗರ	314.68	75.86
9	ಚಿಕ್ಕಬಳ್ಳಾಪುರ	46.98	54.90
10	ಚಿಕ್ಕಮಗಳೂರು	448.51	365.69

11	ಚಿತ್ರದುರ್ಗ	359.25	315.16
12	ದಕ್ಷಿಣ ಕನ್ನಡ	85.30	19.67
13	ದಾವಣಗೆರೆ	379.41	165.65
14	ಧಾರವಾಡ	232.06	214.90
15	ಗದಗ	433.04	283.74
16	ಗುಲ್ಬರ್ಗಾ	588.42	339.38
17	ಹಾಸನ	783.97	367.49
18	ಹಾವೇರಿ	578.57	228.27
19	ಕೊಡಗು	26.43	48.56
20	ಕೋಲಾರ	464.68	496.22
21	ಕೊಪ್ಪಳ	1054.09	722.50
22	ಮಧುಗಿರಿ	46.98	38.27
23	ಮಂಡ್ಯ	171.51	57.27
24	ಮೈಸೂರು	221.27	148.01
25	ರಾಯಚೂರು	202.37	689.79
26	ಶಿವಮೊಗ್ಗ	223.38	110.63
27	ತುಮಕೂರು	275.77	359.49
28	ಉಡುಪಿ	57.30	0.00
29	ಉತ್ತರ ಕನ್ನಡ	268.33	172.83

(ಷರಾ : ಜಿಲ್ಲಾವಾರು ವೆಚ್ಚದಲ್ಲಿ ಹಿಂದಿನ ವರ್ಷದ ಉಳಿಕೆ ಹಣ ಹಾಗೂ ರಾಜ್ಯದ ಪಾಲು ಸೇರಿರುತ್ತದೆ.)

667 (419) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) - ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006-07ನೇ ಸಾಲಿನಲ್ಲಿ ಈವರೆವಿಗೆ ರಾಜ್ಯದಲ್ಲಿ ಹಮ್ಮಿಕೊಳ್ಳಲಾದ ಎತ್ತು ಮತ್ತು ಬಂಡಿ ಒದಗಿಸುವ ಯೋಜನೆಯಲ್ಲಿ ಪ್ರಯೋಜನೆಯನ್ನು ಪಡೆದಿರುವ ರೈತ ಫಲಾನುಭವಿಗಳೆಷ್ಟು ;

ಆ) ಈ ಕಾರ್ಯಕ್ರಮಕ್ಕಾಗಿ ಸರ್ಕಾರವು ಒದಗಿಸಲಾದ ಅನುದಾನವೆಷ್ಟು ; ಇದರಲ್ಲಿ ಎಷ್ಟು ಅನುದಾನವನ್ನು ರೈತರಿಗೆ ವಿತರಿಸಲಾಗಿದೆ ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;

ಇ) ಇದರಲ್ಲಿ ಸರ್ಕಾರದ ಸಹಾಯಧನವೆಷ್ಟು ಹಾಗೂ ರೈತರು ನೀಡಬೇಕಾದ ಸಾಲದ ಮೊತ್ತವೆಷ್ಟು; ಇದನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತಿದೆ ?